**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ : 4548/2022**

ಫಿರ್ಯಾದುದಾರರು : ಹೆಚ್.ಸಿ. ಪ್ರದೀಪ್‌ಕುಮಾರ್ ಬಿನ್ ಕೂಸಯ್ಯ,
ವಯಸ್ಸು ಸುಮಾರು .... ವರ್ಷ,
ವಾಸಃ ಹರದನಹಳ್ಳಿ ಗ್ರಾಮ, ಹುಲ್ಲಹಳ್ಳಿ ಹೋಬಳಿ ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿ : ನಿಂಗರಾಜು ಬಿನ್ ನಿಂಗಯ್ಯ,
ವಯಸ್ಸು ಸುಮಾರು 42 ವರ್ಷ,
ವಾಸಃ ಹೊಸಹೊಳಲು ಗ್ರಾಮ, ಅಂತರಸಂತೆ ಹೋಬಳಿ,
ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.
ಕೇರ್ ಆಫ್ ಕೃಷ್ಣಯ್ಯ,
ವಾಟರ್ ಟ್ಯಾಂಕ್ ಮುಖ್ಯಗೇಟ್‌ನ ಎದುರು ಮನೆ,
ಹೌಸಿಂಗ್ ಬೋರ್ಡ್ ಕಾಲೋನಿ,
ಹೆಚ್.ಡಿ. ಕೋಟೆ ಪಟ್ಟಣ,
ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ**

*ಶ್ರೀ ರಘುರಾಮ ಎನ್. ಎಸ್.*, ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ಫಿರ್ಯಾದುದಾರರಾದ ಹೆಚ್.ಸಿ. ಪ್ರದೀಪ್‌ಕುಮಾರ್ ಇವರಿಗೆ ಆರೋಪಿತರಾದ ತಾವು ಪರಿಚಿತರಾಗಿದ್ದು, ನೀವು ನಿಮ್ಮ ಅಗತ್ಯತೆಗಾಗಿ ಅಂದರೆ ಗುತ್ತಿಗೆ ಕೆಲಸವನ್ನು ಮಾಡಿಸಲು ಫಿರ್ಯಾದುದಾರರಿಂದ ರೂ.3,00,000/- ಹಣವನ್ನು ದಿನಾಂಕ 10.03.2020 ರಂದು

ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನೀವು ದಿನಾಂಕ 14.05.2020 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್.ಡಿ. ಕೋಟೆ ಶಾಖೆಯಲ್ಲಿ ಆರೋಪಿತರಾದ ತಾವು ಹೊಂದಿರುವ ಖಾತೆ ಸಂಖ್ಯೆ.54018956817 ರ ಚೆಕ್ ಸಂಖ್ಯೆ 833331 ನ್ನು ರೂ.3,00,000/- ಕ್ಕೆ ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ ನಂಜನಗೂಡು ತಾಲ್ಲೂಕಿನ ಕರ್ನಾಟಕ ಗ್ರಾಮೀಣ ಬ್ಯಾಂಕ್, ಚಂದ್ರವಾಡಿ ಶಾಖೆಯ ಮೂಲಕ ದಿನಾಂಕ 15.05.2020 ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸ್ಸಾಗಿದ್ದು ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 18.06.2020 ರಂದು ನೋಟೀಸನ್ನು ಜಾರಿಗೊಳಿಸಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 20.06.2020 ರಂದು ಜಾರಿಯಾಗಿದ್ದರೂ ಸಹ ನೀವು ನೋಟೀಸಿಗೆ ಉತ್ತರವನ್ನು ನೀಡಿಲ್ಲ ಮತ್ತು ಚೆಕ್ಕಿನ ಹಣವನ್ನು ಪಾವತಿಸಿರುವುದಿಲ್ಲ. ಆದ್ದರಿಂದ ನೀವು ಲಿಖಿತ ವರ್ಗಾವಣೆಯ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಪ್ರಶ್ನೆಃ 1- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೆ ?

ಆರೋಪಿ ಉತ್ತರ :

ಪ್ರಶ್ನೆಃ 2 ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ ?

ಆರೋಪಿ ಉತ್ತರ :

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ 19.10.2023 ರಂದು ದೃಡಪಡಿಸಿರುತ್ತೇನೆ.

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.